ಲೆ. ಮೈಸೂರು ವಾಸ್ತವ್ಯರಾಗಿ ವ್ಯವಹರಿಸುತ್ತಿದ್ದ ಅಮಿನಾ ಬೈರಯ್ಯನೆಂಬುವರ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ತೀವಣಿ ವೊಬಲಗನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ ನೆ ರಿಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪನೆಂಬುವನ ಅರ್ಜಿಯನ್ನು ಸ|| 1907ನೆ ಇಸವಿ ಡಿಸೆಂಬರು ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಮಿನಾ ಬೈರಯ್ಯನೆಂಬುವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯು ಪಡಿಸಿ ಇದೆ.

ಸ|| 1907ನೆ ಇಸವಿ ನವಂಬರ್ ತಿಂಗಳು 26ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತಿನೊಂದಿಗೆ ಕೊಡೋಣಾಗಿದೆ.

ಬಿ. ಎಸ್. ಕೃಷ್ಣಸ್ವಾಮಿ,
ಸಬಾರ್ಡಿನೇಟ್ ಜಡ್ಜ್.

ನೋಟಿಸ್.

ಬೆಂಗಳೂರು ತಾಲ್ಲೂಕು ದೊಡ್ಡಬಳ್ಳಾಪುರ ರೇಂಜ್ ಅಸಿಸ್ಟೆಂಟ್ ಕಮಿಷನರವರ ಆಫೀಸು.
ತಾರೀಖು 18ನೆ ನವಂಬರ್ 1907.

ನೆಲಮಂಗಲ ತಾಲ್ಲೂಕು ದಾಸನಪುರದ ಹೋಬಳಿ ಜೋಡಿ ಬೈಯ್ಯಂಡಹಳ್ಳಿ ಗ್ರಾಮದ ಅರ್ಧಪಾಲು ಹಿಸ್ಸೆದಾರ್ರು ಬೆಂಗಳೂರು ಚಿಕ್ಕಪೇಟೆ ಸುಮತೇಂದ್ರ ಮತದಲ್ಲಿರುವ ಭೀಮಾಚಾರ್ರ ಸೊಸೆ ವೆಂಕೋಬಾಯಮ್ಮ ಬೆಂಗಳೂರು ಯಲಹಂಕದ ಬಾಗಿಲನಲ್ಲಿ ವಾಸವಾಗಿರುವ ಸಾಗಪಾಲು ಹಿಸ್ಸೆದಾರ್ ಹುಲ್ಲಳ್ಳಿ ಮಲ್ಲಿಕಾರ್ಜುನೈಯ್ಯನವರ ಮಗ ನಾಗಪ್ಪ ಮತ್ತು ಸಾಗಪಾಲು ಹಿಸ್ಸೆದಾರ್ ಬೈಯ್ಯಂಡಹಳ್ಳಿ ಗ್ರಾಮದ ಹುಸ್ಕೂರು ಚನ್ನಪ್ಪ, ಅನುಭವದಾರ್ ಪಟೇಲ್ ಶಾಂತವೀರಪ್ಪ ಇವರಿಗೆ ತಿಳಿಯಪಡಿಸುವದೇನಂದರೆ :—

ಮೇಲ್ಕಂಡ ಜೋಡಿಗ್ರಾಮವು ಕೆಂದಿ ಹುಟ್ಟುವಳಿಲಿ ನಿಮಗೆ ಇರಬಹುದಾದ ಹಕ್ಕಿನ ವಿಚಾರವನ್ನು ಕುರಿತು ತನಿಖೆ ಕ್ರಮ ನಡಿಯಬೇಕಾಗಿರುವದ್ದರಿಂದ ಈ ಬಗ್ಯೆ ನಿಮ್ಮಲ್ಲಿರತಕ್ಕ ವಿಶಿಷ್ಟ ದಾಖಲಾತಿಗಳ ನಿಜ ನೀಪು ಪ್ರತಿಬಬ್ಬರು 1908ನೆ ಇಸವಿ ಜನವರಿ 4ನೆ ತಾರೀಖು ದಿವಿ 11ಕ್ಕೆ ಬೆಂಗಳೂರು ವೊಕ್ಕಾಂ ಈ ಕೋರ್ಟ್ ರೂಬರೂಬ್ ಹಾಜರಾಗಬೇಕು. ಇದಕ್ಕೆ ತಪ್ಪಿದರೆ ನಿಮ್ಮ ತಕರಾರು ಅಂಗೀಕರಿಸದೆ ಏಕಪಕ್ಷವಾಗಿ ನಿಮಗೆ ಈ ಬಾಬಿನಲ್ಲಿ ಬರತಕ್ಕದ್ದೇನೂ ಇಲ್ಲವೆಂದು ನಿರ್ಣಯಿಸಲ್ಪಡುತ್ತೆ ತಿಳಿಯುವದು.

ಟಿ. ಶೇಷಕೃಷ್ಣ, ಅಸಿಸ್ಟೆಂಟ್ ಕಮಿಷನರ್.

ಅಮೃತಮಹಲ್ ಇಲಾಖೆ.

ಪ್ರಕಟನೆ.

ಹಾಸನ (ವೊಕ್ಕಾಂ), ತಾರೀಖು 13-14ನೆ ನವಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಅಮೃತಮಹಲ್ ಇಲಾಖಾ ಬಾಬತು ಹೆಂಣು ಮತ್ತು ಗಂಡು ರಾಸುಗಳನ್ನ ಚಾಲ್ತೀ ಇಸವಿ ಡಿಸೆಂಬರ್ ಮಾಹೆ 2ನೆ ತಾರೀಖು ಲಾಗಾಯಿತು "ಹೊಳಲ್ಕೆರೆ" ವೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಸದರಿ ಹರಾಜಾಗುವ ಸ್ಥಳಕ್ಕೆ ಹಾಜರಾಗಿ ರಾಸುಗಳನ್ನ ಛಡ ಸವಾಲಿನಿಂದ ಪಡಿಯಬಹುದು.

ವೊಕ್ಕಾಂ ಹೊಳಲ್ಕೆರೆ, ತಾರೀಖು 25-27ನೆ ನವಂಬರ್ 1907.

ಅಮೃತಮಹಲ್ ಇಲಾಖಾ ಬಾಬತು ಕೆಲವು ಗಂಡುರಾಸುಗಳನ್ನ ಚಾಲ್ತಿ ಇಸವಿ ಡಿಸೆಂಬರು 10ನೆ ತಾರೀಖು ಲಾಗಾಯಿತು ತಿಪಟೂರು ತಾಲ್ಲೂಕು ಕೊನೆಹಳ್ಳಿ ರೈಲ್ವೆ ಸ್ಟೇಷನ್ ಬಳಿಯಲ್ಲೂ ಅದೇ ಮಾಹೆ 15ನೆ ತಾರೀಖು ಲಾಗಾಯಿತು ಹಾಸನ ತಾಲ್ಲೂಕು ದುನ್ನದ ವೊಕ್ಕಾಂನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಸದರಿ ಸ್ಥಳಗಳಿಗೆ ಹಾಜರಾಗಿ ಛಡ ಸವಾಲಿನಲ್ಲಿ ರಾಸುಗಳನ್ನ ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟೆಂಡೆಂಟ್.

ನೋಟಿಸ್.

ತೀರ್ಥಹಳ್ಳಿ, ತಾರೀಖು 9ನೆ ನವಂಬರ್ 1907.

ಈ ಕೆಳಗೆ ರುಜು ಮಾಡಿದ ತೀರ್ಥಹಳ್ಳಿ ಜವಳಿ ರಘುಪತಯ್ಯನವರ ಮಗ ಹನುಮಂತರಾಯನು ಇದರಿಂದ ಸಮಸ್ತ ಜನಗಳಿಗೂ ಕೃತಪಡಿಸುವದೇನಂದರೆ :—

1. ತೀರ್ಥಹಳ್ಳಿ ಜವಳಿ ಕೃಷ್ಣಯ್ಯನವರ ಮಕ್ಕಳು ವಿಠಲಯ್ಯನವರು ಮತ್ತು ಜವಳಿ ಸುಬ್ಬಾಯರ ಮಕ್ಕಳು ಮಂಜಪ್ಪನವರು, ಸಹಾ ನಮ್ಮ ಮೈನಾಟಿ ಕಾಲದಾರ್ಯ ನಮ್ಮ ಜನಕತಂದೆ ರಘುಪತಯ್ಯನವರಿಗೆ ಸ್ವಾರ್ಜಿತವಾಗಿಯು ನಮಗೆ ಪಿತಾರ್ಜಿತವಾಗಿಯೂ ಇರುವ ಪೈವಟ್ಟಿನ ಆಚಿತ ನೋಡುತ್ತಾ ಇದ್ದರು. ಈ ಪೈಕಿ ವಿಠಲಯ್ಯನವರು ಈಚೆಗೆ ಮೃತಪಟ್ಟಿದ್ದಾರೆ.